ಮಳೆ ಪ್ರಾರಂಭವಾಗುವುದಕ್ಕಿಂತ ಮೊದಲು ಊರಿಗೆ ಸೇರಿಕೊಂಡರೆ ಸಾಕೆಂದು ಯೋಚಿಸಿದ ನಲವತ್ತಾರರ ಆಸುಪಾಸಿನಲ್ಲಿರುವ ಜವರ, ಸಂತೆಯಲ್ಲಿ ಅಷ್ಟೇನೂ ಲವಲವಿಕೆಯಿಂದಿರಲಿಲ್ಲ. ಮಧ್ಯಾಹ್ನಕಿಂತ ಮೊದಲೇ ವ್ಯಾಪಾರಸ್ಥರು ಗಂಟುಮೂಟೆ ಕಟ್ಟುತ್ತಿರುವುದು ಅವನ ಗಮನಕ್ಕೆ ಬಂದಿತ್ತು. ಬೆಳಗ್ಗೆಯಿಂದಲೂ ಆಕಾಶದಲ್ಲಿ ಮೋಡ ಕಟ್ಟಿಕೊಂಡಿತ್ತು. ಇನ್ನು ಯಾವುದೇ ಕ್ಷಣದಲ್ಲಿ ಮಳೆಯಾಗುವ ಸಂಭವವಿತ್ತು. ಸಾಮಾನ್ಯವಾಗಿ ಬೆಳಗ್ಗೆ ಪ್ರಾರಂಭವಾಗುವ ಸಂತೆ ಸಂಜೆಯವರೆಗೆ ನಡೆಯುತ್ತಿತ್ತು .

ಜವರನ ಬಳಿ ಮಾರಾಟವಾಗದೆ ಎರಡು ಕೋಳಿಗಳು ಉಳಿದುಕೊಂಡಿದ್ದವು. ಒಟ್ಟು ಹನ್ನೆರಡು ಕೋಳಿಗಳನ್ನು ಕುಕ್ಕೆಯಲ್ಲಿಟ್ಟುಕೊಂಡು, ಅವನ್ನು ನೀರಹಳ್ಳಿಯಿಂದ ಸಂತೆ ನಡೆಯುವ ಈ ಊರಿಗೆ ಅಂದರೆ ಆರು ಕಿ.ಮೀ. ನಡೆದುಕೊಂಡು ಬಂದಿದ್ದ. ಹೊಲ ಗದ್ದೆಗಳ ಮಧ್ಯದಲ್ಲಿರುವ ರಸ್ತೆ ಮೂಲಕ ಬಂದಿದ್ದ. ಬಸ್ಸಿನ ಸೌಲಭ್ಯವಿರಲಿಲ್ಲ.

ಅವನು ಬಹಳ ಹಿಂದಿನಿಂದ ನಾಟಿ ಕೋಳಿಗಳ ವ್ಯಾಪಾರ ಮಾಡುತ್ತಿದ್ದ. ಸುತ್ತಮುತ್ತಲಿನ ಹಳ್ಳಿಗಳಲ್ಲಿ ಸುತ್ತಾಡಿ ಕೋಳಿಗಳನ್ನು ಕೊಂಡು, ಸಮೀಪದಲ್ಲಿ ನಡೆಯುವ ಸಂತೆಗಳಲ್ಲಿ ಮಾರಾಟ ಮಾಡುವುದಲ್ಲದೆ ಹತ್ತಿರದ ಪೇಟೆಗೂ ಹೋಗಿ ಮಾರುತ್ತಿದ್ದ.

ಇತ್ತೀಚೆಗೆ ನಾಲ್ಕು ದಿನಗಳಿಂದ ಜ್ವರದಿಂದ ಹಾಸಿಗೆ ಹಿಡಿದು ಮಲಗಿಕೊಂಡಿದ್ದ. ನಿನ್ನೆಯಷ್ಟೇ ಜ್ವರ ಕಡಿಮೆಯಾಗಿತ್ತು. ದೇಹ ಸ್ವಲ್ಪ ಆಯಾಸಗೊಂಡಿದ್ದರೂ ಅದನ್ನು ಲೆಕ್ಕಿಸದಿರಲಿಲ್ಲ. ಆಮೇಲೆ ಇನ್ನೊಂದು ಬೇಸರದ ಸಂಗತಿಯೆಂದರೆ ಅವನು ಸಂತೆಗೆ ಹೊರಡಲು ನಿಂತಾಗ ವಿಶ್ವ ಬಂದು, 'ಇನ್ನು ಎಂಟು ದಿನಗಳಲ್ಲಿ ಜಾಗ ಖಾಲಿ ಮಾಡದಿದ್ದರೆ ಸರಿಯಿರುವುದಿಲ್ಲ' ಎಂದು ಕೂಗಾಟ ಮಾಡಿ ಹೋಗಿದ್ದ .

ದೇವಪ್ಪನಿಗೆ ಸೇರಿದ ಜಾಗದಲ್ಲಿ ಜವರ ತುಂಬಾ ವರ್ಷದಿಂದ ಒಂದು ಗುಡಿಸಲು ಕಟ್ಟಿಕೊಂಡು ಜೀವನ ಸಾಗಿಸುತ್ತಿದ್ದ. ದೇವಪ್ಪ ಈಗಿಲ್ಲ. ಅವನ ಮೊಮ್ಮಗ ವಿಶ್ವ ಸ್ವಲ್ಪ ಬಿಸಿ ರಕ್ತದವನು.

ಈಗ ಇದ್ದಕ್ಕಿದ್ದಂತೆ ಗುಡಿಸಲು ತೆರವು ಮಾಡಬೇಕೆಂದು ಪೀಡಿಸತೊಡಗಿದ್ದ. ಮನೆಯಲ್ಲಿ ಹಸಿ ಬಾಣಂತಿ ಇರುವುದರ ಬಗ್ಗೆ ಅವನಿಗೆ ಒಂದು ಚೂರೂ ಕರುಣೆಯಿರಲಿಲ್ಲ.

ಜವರನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಅವನು ಕಂಗಾಲಾಗಿ ಹೋಗಿದ್ದ.

ಎಲ್ಲಾದರೊಂದು ಕಡೆ ಗುಡಿಸಿಲು ಕಟ್ಟಿಕೊಳ್ಳೋಣ ಎಂದರೆ ಕೈಯಲ್ಲಿ ಬಿಡಿಗಾಸೂ ಇರಲಿಲ್ಲ. ಇರುವ ಬಂಡವಾಳದಲ್ಲಿ ಕೋಳಿಗಳನ್ನು ಕೊಂಡುಕೊಂಡು ಮಾರಾಟ ಮಾಡುತ್ತಿದ್ದ. ಸ್ವಲ್ಪ ಪರಿಚಯವಿರುವವರು ಕೋಳಿ ಸಾಲ ಕೊಟ್ಟು, 'ಮಾರಿಕೊಂಡು ಬಂದು ದುಡ್ಡು ಕೊಡು' ಎನ್ನುತ್ತಿದ್ದರು.

ಜವರ ಸಂತೆಯಿಂದ ಹೊರಟು ಸ್ವಲ್ಪವೇ ದೂರ ಬಂದಿರಬೇಕು, ಮಳೆ ಪ್ರಾರಂಭವಾಗಿ ಹೋಯಿತು. ಕೆರೆಯ ಏರಿ ಮೇಲೆ ನಡೆದುಕೊಂಡು ಹೋಗುತ್ತಿರುವಾಗ ಗಾಳಿ ಎಷ್ಟೊಂದು ಜೋರಾಗಿ ಬೀಸುತ್ತಿತ್ತೆಂದರೆ ಕುಕ್ಕೆ ಹೊತ್ತುಕೊಂಡು ನಡೆಯಲು ಸಾಧ್ಯವಾಗದಾಯಿತು. ತಲೆ ಮೇಲೆ ಕುಕ್ಕೆ ಹೊತ್ತುಕೊಂಡಿದ್ದರಿಂದ ಗಾಳಿ ಬೀಸಿದ ಕಡೆ ಅವನು ವಾಲತೊಡಗಿದ. ಇನ್ನು ತನ್ನಿಂದ ಕುಕ್ಕೆ ಹೊತ್ತುಕೊಂಡು ನಡೆಯಲು ಸಾಧ್ಯವೇ ಇಲ್ಲವೆಂದೆನಿಸಿದಾಗ ತಲೆಯಿಂದ ಕುಕ್ಕೆ ಇಳಿಸಿ ಅದರಲ್ಲಿರುವ ಕೋಳಿಗಳ ಕಾಲುಗಳನ್ನು ಬಿಚ್ಚಿ ಬಿಟ್ಟು ಬಿಟ್ಟ. ಅವು ತೋಚಿದ ದಿಕ್ಕಿನಲ್ಲಿ ಓಡಿಹೋದವು. ಖಾಲಿ ಕುಕ್ಕೆಯನ್ನು ಎಸೆದು ಹಿಂತಿರುಗಿ ನೋಡದೆ ಓಡಿದ.

ರಸ್ತೆಯಲ್ಲಿ ಸಿಗುವ ದೇವಸ್ಥಾನದ ಜಗಲಿ ಮೇಲೆ ಸ್ವಲ್ಪ ಸಮಯ ನಿಲ್ಲಲು ಮನಸ್ಸಾಯಿತು. ಆದರೆ ನಿಲ್ಲಲಿಲ್ಲ. ತುಸು ದೂರದಲ್ಲೇ ಎಮ್ಮೆಕೊಪ್ಪಲು ಇತ್ತು. ಅಲ್ಲಿ ಅವನ ಕಡೆಯವರ ನಾಲ್ಕಾರು ಮನೆಗಳಿದ್ದವು.

ಅಲ್ಲಿಂದ ಹೊರಟು, ಯಾರ ಮನೆಗೆ ಹೋದರೆ ಸರಿಯೆಂದು ಯೇಚಿಸುತ್ತಿರುವಾಗಲೇ ತಮ್ಮಯ್ಯನ ಮನೆ ಎದುರಾಯಿತು. ಮಳೆ ಕಡಿಮೆಯಾಗುವವರೆಗೆ ಇಲ್ಲಿದ್ದರೆ ಸರಿಯೆಂದು ಆ ಮನೆಯ ಜಗಲಿ ಹತ್ತಿದ.

ಅವನು ಒದ್ದೆಯಾಗಿರುವುದನ್ನು ಕಂಡ ತಮ್ಮಯ್ಯ ಮೈ ಒರೆಸಿಕೆಳ್ಳಲು ಬಟ್ಟೆ ಕೊಟ್ಟಿದ್ದಲ್ಲದೆ, ಜಗಲಿಯ ಮೂಲೆಯಲ್ಲಿ ಹಾಕಿರುವ ಚಾಪೆಯ ಮೇಲೆ ಕುಳಿತುಕೊಳ್ಳಲು ಹೇಳಿದ. 'ಜೋರು ಮಳೆಯಿದೆ, ಹೋಗುವುದು ಬೇಡ'ವೆಂದು ತಾಕೀತು ಮಾಡಿದ.

ಜವರನಿಗೆ ಮನೆಯ ಚಿಂತೆ ಕಾಡತೊಡಗಿತು.



ಒಂದು ವೇಳೆ ಊರಲ್ಲಿ ಸಹ ಹೀಗೆಯೇ ಮಳೆಯಾಗುತ್ತಿದ್ದರೆ? ಊರಿನ ಸ್ಥಿತಿ ಏನಾಗಿರಬಹುದು?

ಊರಿರುವುದು ತಗ್ಗಿನಲ್ಲಿ. ಊರಿನ ಪಕ್ಕವೇ ದೊಡ್ಡದೊಂದು ಗುಡ್ಡವಿದೆ, ಕೆರೆಯಿದೆ.

ಜವರನ ಮಗಳು ಈಗ ಬಾಣಂತಿ. ಜವರನಿಗೆ ಒಬ್ಬಳೇ ಮಗಳು. ಮದುವೆಯಾಗಿ ನಾಲ್ಕು ವರ್ಷಗಳಾಗಿವೆ. ಅಳಿಯ ಕುಡುಕ. ಬಾಣಂತನಕ್ಕೆಂದು ಹೆಂಡತಿಯನ್ನು ಬಿಟ್ಟು ಹೋದವನು ಮೂರು ತಿಂಗಳಿಂದ ಈ ಕಡೆ ತಲೆ ಹಾಕಿರಲಿಲ್ಲ.

ಬಾಣಂತಿ ಹಾಗೂ ಎರಡು ತಿಂಗಳಿನ ಎಳೆಯ ಕೂಸು ಚಳಿಯಿಂದ ನಡುಗುತ್ತಿರಬಹುದು. ಹೆಂಡತಿ ಹೈರಾಣಾಗಿ ಹೋಗಿರಬಹುದು. ಗುಡಿಸಲಿನ ಛಾವಣಿ ಸಹ ಅಷ್ಟೇನೂ ಮಜಬೂತಾದ್ದಲ್ಲ. ಈ ಸಮಯದಲ್ಲಿ ನಾನು ಅಲ್ಲಿರಬೇಕಾಗಿತ್ತು. ಎಂತಹ ಎಡವಟ್ಟಾಗಿ ಹೋಯಿತು. ಮಳೆಯಲ್ಲಿ ಇಲ್ಲಿ ಸಿಕ್ಕಿ ಹಾಕಿಕೊಂಡೆ. ಹೀಗೆ ಯೋಚಿಸುತ್ತ ಜವರ ನೆಮ್ಮದಿ ಕಳೆದುಕೊಂಡಿದ್ದ.

ಮಳೆ ಕಡಿಮೆಯಾಗಿರಲಿಲ್ಲ, ಮತ್ತಷ್ಟು ಜೋರಾಗಿ ಹೊಯ್ಯುತ್ತಿತ್ತು. ಸಮಯಕ್ಕಿಂತ ಮುಂಚೆಯೇ ಕತ್ತಲೆ ಹರಡಿಕೊಳ್ಳಲು ಪ್ರಾರಂಭಿಸಿತ್ತು. ಈಗಂತೂ ಊರಿಗೆ ಹೋಗಲು ಸಾಧ್ಯವಿಲ್ಲ. ಹೋಗುತ್ತೇನೆಂದು ಹಟ ಹಿಡಿದು ನಡೆದರೆ ದಾರಿಯಲ್ಲಿ ಪ್ರಾಣ ಹೋದರೂ ಆಶ್ಚರ್ಯವಿಲ್ಲ.

ಮಂಕಾಗಿ ಕುಳಿತುಕೊಂಡ ಜವರ ಸುರಿಯುತ್ತಿರುವ ಮಳೆಯನ್ನೇ ನೋಡತೊಡಗಿದ.

ಎಮ್ಮೆಕೊಪ್ಪಲು ಸ್ವಲ್ಪ ಎತ್ತರದಲ್ಲಿದರೂ ಬೀದಿಗಳಲ್ಲಿ ನೀರು ನಿಂತುಕೊಳ್ಳಲು ಪ್ರಾರಂಭಿಸಿತ್ತು. ತನ್ನೂರಂತೂ ಮತ್ತಷ್ಟು ತಗ್ಗಿನಲ್ಲಿದೆ. ಅಲ್ಲಿ ಏನಾಗಿರಬಹುದು?

ಅಷ್ಟರಲ್ಲೇ ತಮ್ಮಯ್ಯ ಅನ್ನದ ತಟ್ಟೆ, ಕುಡಿಯಲು ನೀರು ತಂದುಕೊಟ್ಟಿದ್ದ. ಊಟದ ನಂತರ ಹೊದ್ದುಕೊಳ್ಳಲು ಹೊದಿಕೆಯನ್ನೂ ಕೊಟ್ಟ. 'ಊರಿಗೆ ಹೋಗುವ ಯೋಚನೆಯನ್ನು ಬಿಡು. ರಸ್ತೆಯಲ್ಲಿ ಎರಡು ಕಾಲುವೆಗಳಿವೆ. ಅವು ಮೈದುಂಬಿ ಹರಿಯುತ್ತಿರಬಹುದು' ಎಂದು ಹೇಳಿದ ತಮ್ಮಯ್ಯ.

ಮನೆಯ ಯೋಚನೆಯಲ್ಲಿ ಜವರನಿಗೆ ಊಟವನ್ನೂ ಸರಿಯಾಗಿ ಮಾಡಲಾಗಿರಲಿಲ್ಲ. ಗೋಡೆಗೊರಗಿಕೊಂಡು ಸುಮ್ಮನೆ ಹೊರಗೂ ಒಳಗೂ ಹರಡಿರುವ ಕತ್ತಲೆಯನ್ನು ನೋಡತೊಡಗಿದ.

ಬೆಳಗಾಯಿತು. ಮಳೆ ಮಾತ್ರ ಕಡಿಮೆಯಾಗಲಿಲ್ಲ. ಮಧ್ಯಾಹ್ನದ ವೇಳೆಗೆ ಮಳೆ ನಿಲ್ಲಬಹುದೆಂದು ತನಗೆ ತಾನೇ ಸಮಾಧಾನ ಮಾಡಿಕೊಂಡ. ಆದರೆ ಮಳೆ ನಿಲ್ಲಲಿಲ್ಲ. ಮನೆ ಕಡೆ ಯೋಚನೆ ಹೋದ ಕೂಡಲೇ ಅವನಿಗೆ ಉಸಿರಾಟವೇ ನಿಂತಂತೆ ಭಾಸವಾಗುತ್ತಿತ್ತು. ಆ ದಿನ